3. ಅಶಕ್ತ, ಗರ್ಭಿಣಿ ಮತ್ತು ವಯಸ್ಸಾದವರು, ಕುರಿಗಳನ್ನು ದ್ರಾವಣ ತುಂಬಿದ ಕೊಳದಲ್ಲಿ ಅದ್ದಬಾರದು.
4. ಮೈಮೇಲಿನ ಗಾಯಗಳ ಒಳಗೆ ಉಣ್ಣೆ ನಾಶಕ ತಗುಲದಂತೆ ನೋಡಿಕೊಳ್ಳಬೇಕು.
5. ಉಣ್ಣೆ ನಾಶಕಗಳನ್ನು ಉಪಯೋಗಿಸುವ ಮುನ್ನ ಪ್ರಾಣಿಗಳಿಗೆ ಚೆನ್ನಾಗಿ ನೀರು ಕುಡಿಸಬೇಕು.
6. ಮಳೆ, ಗಾಳಿ ಮತ್ತು ಚಳಿ ಇರುವಾಗ ಉಣ್ಣೆ ನಾಶಕಗಳನ್ನು ಹಚ್ಚಬಾರದು.
7. ಕೈ ಚೀಲ ಹಾಕಿಕೊಂಡು ಉಣ್ಣೆ ನಾಶಕ ಹಚ್ಚುವುದು ಸೂಕ್ತ.
8. ಉಣ್ಣೆ ನಾಶಕಗಳನ್ನು ಉಪಯೋಗಿಸಿದ ನಂತರ ಚೆನ್ನಾಗಿ ಕೈ ತೊಳೆದುಕೊಳ್ಳಬೇಕು.

ಉಣ್ಣೆಗಳ ನಿಯಂತ್ರಣ ಮತ್ತು ಹತೋಟಿ

1. ಉಣ್ಣೆಗಳಿರುವ ದನಗಳಿಗೆ ಸೂಕ್ತ ಉಪಚಾರ ಮಾಡಿಸಬೇಕು.
2. ಪ್ರಾಣಿಗಳ ಕೊಟ್ಟಿಗೆಗಳಲ್ಲಿ ಸಂದು-ಗೊಂದುಗಳು ಇರದಂತೆ ನೋಡಿಕೊಳ್ಳಬೇಕು.
3. ಉಣ್ಣೆಗಳಿರುವ ಜಾಗಗಳಲ್ಲಿ ಉಣ್ಣೆ ನಾಶಕಗಳನ್ನು ಸಿಂಪಡಿಸಬೇಕು, ಆದರೆ ಈ ಉಣ್ಣೆ ನಾಶಕಗಳು ಮೇವು ಹಾಗೂ ನೀರಿನಲ್ಲಿ ಕೂಡದಂತೆ ಎಚ್ಚರಿಕೆ ವಹಿಸಬೇಕು.
4. ಉಣ್ಣೆಗಳು ಹೆಚ್ಚಾಗಿರುವ ಹೊಲಗಳಲ್ಲಿ ಹುಲ್ಲು ಮತ್ತು ಕಸವನ್ನು ಸುಡಬೇಕು. ಚೆನ್ನಾಗಿ ಉಳುಮೆ ಮಾಡುವದರಿಂದ ನೆಲದ ಮೇಲಿನ ಉಣ್ಣೆ, ತತ್ತಿ ಮತ್ತು ಮರಿಗಳು ನೆಲದ ಒಳಗೆ ಹೋಗಿ ಸಾಯುತ್ತವೆ.
5. ಉಣ್ಣೆಗಳು ಹೆಚ್ಚಿರುವ ಕೊಟ್ಟಿಗೆಗಳಿಂದ ಪ್ರಾಣಿಗಳನ್ನು ಕೆಲಕಾಲ ಬೇರ್ಪಡಿಸುವದರಿಂದ ಉಣ್ಣೆಗಳ ಜೀವನಚಕ್ರ ಮುರಿಯುತ್ತದೆ.
6. ಕೆಲವು ಉಣ್ಣೆಗಳು ಇಲಿ ಮುಂತಾದ ಚಿಕ್ಕ ಪ್ರಾಣಿಗಳಿಂದ ಹರಡುವುದರಿಂದ ಅವುಗಳನ್ನು ನಿಯಂತ್ರಿಸಿದರೆ ಸಾಲದು, ತತ್ತಿ ಮತ್ತು ಮರಿಗಳನ್ನು ಸಹ ನಾಶಪಡಿಸಬೇಕು.

ಪ್ರಾಣಿಗಳಿಂದ ಮನುಷ್ಯರಿಗೆ ಉಣ್ಣೆಗಳು ಹರಡಬಲ್ಲವು. ಇವು ಮನುಷ್ಯರ ರಕ್ತವನ್ನು ಹೀರುವದಲ್ಲದೇ ಬೆಬೆಸಿಯಾದಂತಹ ರೋಗಗಳನ್ನೂ ಹರಡಲು ಕಾರಣವಾಗುತ್ತವೆ.

ಆದ್ದರಿಂದ ಮನುಷ್ಯರ ಮತ್ತು ಪ್ರಾಣಿಗಳ ಆರೋಗ್ಯದ ಹಿತದೃಷ್ಟಿಯಿಂದ ಉಣ್ಣೆಗಳ ನಿಯಂತ್ರಣ ಪ್ರಮುಖ ಪಾತ್ರವನ್ನು ವಹಿಸುತ್ತದೆ.ಈ ಮೂಲಕ ಪಶು ಪಾಲನೆಯಲ್ಲಿ ರೈತರಿಗೆ ಹೆಚ್ಚಿನ ಲಾಭ ಬರುವುದು.

ಲೇಖಕರು : ಡಾ. ಪ್ರಹ್ಲಾದ
: ಡಾ. ಶ್ರೀವಾಣಿ ಜಿ.ಎನ್.
: ಡಾ. ಜೆಎನ್ ಶ್ರೀಧರ
ಪುಟ ವಿನ್ಯಾಸ : ದೇವರಾಜ ನಾಯಕ
ಅಕ್ಷರಜೋಡಣೆ : ಕು. ಸುಮಂಗಳಮ್ಮ ಎಂ.

ಪ್ರಕಾಶಕರು : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
ಅಂಚೆ ಪೆಟ್ಟಿಗೆ ಸಂಖ್ಯೆ-329, ರಾಯಚೂರು-584102
ದೂರವಾಣಿ ಸಂಖ್ಯೆ: 0832-220196

UASRPC//LL-15/2019-20

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಪ್ರಾಣಿಗಳಲ್ಲಿ ಉಣ್ಣೆಗಳ ಬಾಧೆ ಹಾಗೂ ಅವುಗಳ ನಿಯಂತ್ರಣ



2019-20

ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ
ರಾಯಚೂರು, 584104

ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿ ರೈತರ ಉಚಿತ ಸಹಾಯವಾಣಿ : 1800-425-0470

ಪ್ರಾಣಿಗಳಲ್ಲಿ ಉಣ್ಣೆಗಳ ಬಾಧೆ ಹಾಗೂ ಅವುಗಳ ನಿಯಂತ್ರಣ

ಪಶು ಪಾಲನೆ ಲಾಭದಾಯಕವಾಗಬೇಕಾದರೆ, ಉತ್ತಮ ಆಹಾರ, ಆರೋಗ್ಯ ನಿರ್ವಹಣೆಗಳು ಪ್ರಮುಖ ಪಾತ್ರವಹಿಸುತ್ತವೆ. ಆರೋಗ್ಯ ನಿರ್ವಹಣೆಯಲ್ಲಿ ವಿವಿಧ ರೀತಿಯ ತೊಂದರೆಗಳನ್ನು ಎದುರಿಸ ಬೇಕಾಗುತ್ತದೆ. ಇದರಲ್ಲಿ ಉಣ್ಣೆಗಳಿಂದ ಉಂಟಾಗುವ ತೊಂದರೆಗಳು ಗಣನೀಯವಾಗಿರುತ್ತವೆ.

ಉಣ್ಣೆಗಳು ದನಗಳ ಚರ್ಮಕ್ಕೆ ಅಂಟಿಕೊಂಡು ಅವುಗಳ ರಕ್ತವನ್ನು ಹೀರುತ್ತವೆ. ಕೆಲವು ಸೂಕ್ಷ್ಮಾಣು ಜೀವಿಗಳ ರೋಗಗಳನ್ನು ಹರಡುತ್ತವೆ ಮತ್ತು ಇವುಗಳ ತೊಂದರೆಯಿಂದ ಪ್ರಾಣಿಗಳು ಸರಿಯಾಗಿ ಮೇವು ತಿನ್ನದೇ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಇವುಗಳ ಸೂಕ್ತ ನಿರ್ವಹಣೆಯಿಂದ ಪ್ರಾಣಿಗಳಿಗಾಗುವ ತೊಂದರೆಗಳು ಮತ್ತು ಅವುಗಳಿಂದಾಗುವ ನಷ್ಟಗಳನ್ನು ತಡೆಗಟ್ಟಬಹುದು.

ಉಣ್ಣೆಗಳು ಅರ್ಯಾಕ್ನಿಡ ವಂಶಕ್ಕೆ ಸೇರಿದ ಸಂಧಿಪಾಧಿಗಳು, ಇವುಗಳ ಜೀವನ–ಚಕ್ರ ಈ ಕೆಳಗಿನಂತಿದೆ.

ಜೀವನಚಕ್ರ

ಪ್ರಾಣಿಗಳ ರಕ್ತವನ್ನು ಕುಡಿದು ಗರ್ಭಿಣಿ ಹೆಣ್ಣು ಉಣ್ಣೆಗಳು ನೆಲದ ಮೇಲೆ ಬೀಳುತ್ತವೆ. ಇವು ಕೊಟ್ಟಿಗೆಯ ಸಂದುಗೊಂದುಗಳಲ್ಲಿ, ಮಣ್ಣಿನ ಹೆಂಟೆಗಳ ಕೆಳಭಾಗದಲ್ಲಿ ಮತ್ತು ಕಲ್ಲುಗಳ ಸಂದುಗಳಲ್ಲಿ, ಲಕ್ಷಾಂತರ ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳು ಒಡೆದು ಚಿಕ್ಕ ಮರಿಗಳು ಹೊರಬರುತ್ತವೆ. ಈ ಮರಿಗಳು ಸಣ್ಣ ಪುಟ್ಟ ಗಿಡಗಳ ಮೇಲೆ ಪ್ರಾಣಿಗಳ ದೇಹಕ್ಕೆ ಅಂಟಿಕೊಳ್ಳಲು ಕಾಯುತ್ತಿರುತ್ತವೆ. ಮಳೆಗಾಲದಲ್ಲಿ ಮತ್ತು ತೇವಾಂಶ ಹೆಚ್ಚಿರುವ ವಾತಾವರಣಗಳಲ್ಲಿ ಕೆಲವು ತಿಂಗಳು ಏನೂ ಸೇವಿಸದೇ ಬದುಕಬಲ್ಲವು. ಬೇಸಿಗೆಯಲ್ಲಿ ಇದರ ಅವದಿ ,ಕಡಿಮೆ. ಆದ್ದರಿಂದ ಮಳೆಗಾಲದಲ್ಲಿ ಉಣ್ಣೆಗಳ ಸಂಖ್ಯೆ ಹೆಚ್ಚಾಗಿರುತ್ತದೆ. ದನಗಳು ಮೇಯಲು ಹೋದಾಗ ಇಂಥ ಗಿಡಗಂಟೆಗಳು ಪ್ರಾಣಿಗಳ ಮೈಗೆ ತಾಗಿದಾಗ ಕಾಯುತ್ತಿರುವ ಮರಿಗಳು ದೇಹಕ್ಕೆ ಅಂಟಿಕೊಳ್ಳುತ್ತವೆ ಇವು ದನಗಳ ರಕ್ತ ಹೀರಿ ಸಂತಾನೋತ್ಪತ್ತಿ ಮುಂದುವರೆಸುತ್ತವೆ.

ಉಣ್ಣೆಗಳಿಂದಾಗುವ ಹಾನಿಗಳು

1. ಪ್ರಮುಖವಾಗಿ ಉಣ್ಣೆಗಳು ಪ್ರಾಣಿಗಳ ರಕ್ತವನ್ನು ಹೀರಿರಕ್ತ ಹೀನತೆಯನ್ನುಂಟು ಮಾಡುತ್ತವೆ.
2. ರಕ್ತ ಹೀನತೆಯಿಂದ ದೇಹದ ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ.
3. ಉಣ್ಣೆಗಳು ಕಚ್ಚಿ ಮಾಡಿದ ಗಾಯಗಳಲ್ಲಿ ಇತರ ನೊಣಗಳು ಕುಳಿತು ರೋಗ ಹರಡುವುದು ಮತ್ತು ಮೊಟ್ಟೆ ಇಡುತ್ತವೆ. ಈ ಮೊಟ್ಟೆಗಳು ಒಡೆದು ಹುಳುಗಳಾಗುತ್ತವೆ.
4. ಉಣ್ಣೆಗಳು ಕೆಲವು ರೋಗಗ್ರಸ್ಥ ಪ್ರಾಣಿಗಳ ದೇಹದಿಂದ ಆರೋಗ್ಯವಂತ ಪ್ರಾಣಿಗಳಿಗೆ ಥೈಲೇರಿಯಾ, ಬೆಬಿಸಿಯಾ, ಅನಾಪ್ಲಾಸ್ಮ ರೋಗಗಳನ್ನು ಹರಡುತ್ತವೆ.
5. ಉಣ್ಣೆಗಳ ಕಡಿತದಿಂದಾಗಿ ಚರ್ಮದ ಗುಣಮಟ್ಟ ಕಡಿಮೆಯಾಗುವುದು.
6. ಕೆಲವು ಉಣ್ಣೆಗಳು ವಿಷವಸ್ತುಗಳನ್ನು ಉತ್ಪಾದಿಸಿ, ಪ್ರಾಣಿಗಳ ದೇಹದೊಳಗೆ ಬಿಡುತ್ತವೆ. ಇದರಿಂದ ಪಾರ್ಶ್ವವಾಯು ತೊಂದರೆ ಉಂಟಾಗಬಹುದು.

ಉಣ್ಣೆಗಳ ಬಾಧೆಯಿಂದ ಉಂಟಾಗುವ ನಷ್ಟಗಳು

1. ಪ್ರಾಣಿಗಳಲ್ಲಿ ಬೆಳವಣಿಗೆ ಕುಂಠಿತಗೊಳ್ಳುತ್ತದೆ ಮತ್ತು ದೇಹತೂಕ ಕಡಿಮೆಯಾಗುತ್ತದೆ.
2. ಸರಿಯಾದ ಸಮಯಕ್ಕೆ ಬೆದೆಗೆ ಬಾರದೇ ಸಂತಾನೋತ್ಪತ್ತಿ ತೊಂದರೆಯುಂಟಾಗುತ್ತದೆ.
3. ಹಾಲು ಉತ್ಪಾದನೆ ಕಡಿಮೆಯಾಗುವದು.
4. ಚರ್ಮ ಮತ್ತು ಕುರಿ ತುಪ್ಪಟ ಬೆಲೆ ಕಡಿಮೆಯಾಗುತ್ತದೆ.
5. ಕೋಳಿಗಳಲ್ಲಿ ತೂಕ ಮತ್ತು ಮೊಟ್ಟೆ ಉತ್ಪಾದನೆ ಕಡಿಮೆಯಾಗುತ್ತದೆ.

ಉಣ್ಣೆಗಳ ಬಾಧೆಗೆ ಚಿಕಿತ್ಸೆ

ಉಣ್ಣೆಗಳನ್ನು ವಿವಿಧ ರೀತಿಯ ರಾಸಾಯನಿಕಗಳು ಮತ್ತು ಔಷಧಿಗಳ ಉಪಯೋಗದಿಂದ ಪ್ರಾಣಿಗಳ ದೇಹದಿಂದ ತೆಗೆಯಬಹುದು.

ರಾಸಾಯನಿಕಗಳಿಂದ ಉಣ್ಣೆಗಳ ನಿಯಂತ್ರಣ

1. ಉಣ್ಣೆ ನಾಶಕ ದ್ರಾವಣವನ್ನು ಪ್ರಾಣಿಗಳ ದೇಹಕ್ಕೆ ಹಚ್ಚುವದು.
2. ಉಣ್ಣೆ ನಾಶಕ ದ್ರಾವಣವನ್ನು ಪ್ರಾಣಿಗಳ ದೇಹಕ್ಕೆ ಯಂತ್ರದಿಂದ ಸಿಂಪಡಿಸುವುದು.
3. ಆಡು ಮತ್ತು ಕುರಿಗಳನ್ನು ಉಣ್ಣೆ ನಾಶಕ ದ್ರಾವಣತುಂಬಿದ ಕೊಳದಲ್ಲಿ ಹಾಯಿಸುವುದು (ಅದ್ದುವುದು).
4. ಇತ್ತೀಚೆಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಫ್ಲೂಮೆಥ್ರಿನ್ ನಂತಹ ದ್ರಾವಣವನ್ನು ದನಗಳ ಬೆನ್ನಿನ ಮೇಲೆ ಸಣ್ಣ ಪ್ರಮಾಣದಲ್ಲಿ ಹಾಕಿದರೆ, ಇದು ಮೈಯೆಲ್ಲಾ ಹರಡಿ ಉಣ್ಣೆಗಳನ್ನು ಸಾಯಿಸುತ್ತದೆ.

ಔಷಧಿಗಳಿಂದ ಉಣ್ಣೆಗಳ ನಿಯಂತ್ರಣ :

ದನಗಳ ಮೈಮೇಲಿರುವ ಉಣ್ಣೆಗಳನ್ನು ಸಾಯಿಸಲು ಚುಚ್ಚುಮದ್ದು, ಮಾತ್ರೆ (ಗುಳಿಗೆ) ಮತ್ತುಕುಡಿಸುವ ಔಷಧಿಗಳು ಲಭ್ಯವಿವೆ.

ಈ ಎಲ್ಲಾ ಕ್ರಮಗಳನ್ನು ಪಶು ವೈದ್ಯರ ಸಲಹೆ ಮೇರೆಗೆ ಮಾತ್ರ ಕೈಗೊಳ್ಳಬೇಕು.

ಉಣ್ಣೆ ನಾಶಕ ರಾಸಾಯನಿಕಗಳನ್ನು ಉಪಯೋಗಿಸುವಾಗ ಅನುಸರಿಸ ಬೇಕಾದ ಮುಂಜಾಗ್ರತಾ ಕ್ರಮಗಳು

1. ಉಣ್ಣೆ ನಾಶಕವನ್ನು ಬಳಸುವಾಗ ದನಗಳ ಬಾಯಿ, ಕಣ್ಣು ಮತ್ತು ಮೂಗಿನ ಒಳಗೆ ಹೋಗದಂತೆ ಎಚ್ಚರಿಕೆ ವಹಿಸಬೇಕು.
2. ರೋಗಗ್ರಸ್ಥ ಮತ್ತು ಸುಸ್ತಾದ ಪ್ರಾಣಿಗಳಿಗೆ ಹಚ್ಚಬಾರದು.